# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 599(792)
**ಸದಸ್ಯರ ಹೆಸರು** : ಶ್ರೀ ಮಧು ಜಿ ಮಾದೇಗೌಡ (ಪದವೀಧರರ ಕ್ಷೇತ್ರ)
**ಉತ್ತರಿಸಬೇಕಾದ ದಿನಾಂಕ** : 26.12.2022
**ಉತ್ತರಿಸಬೇಕಾದ ಸಚಿವರು** : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಎನ್.ಇ.ಪಿ ಅನುಷ್ಠಾನ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದಲ್ಲಿ ಯಾವ ಹಂತದಲ್ಲಿದೆ; | ರಾಷ್ಟ್ರೀಯ ಶಿಕ್ಷಣ ನೀತಿ 2020ರ ಆದೇಶದಂತೆ ಅರ್ಹತೆ ಹೊಂದಿರುವ ಪ್ರೇರಿತ ಹೊಸ ಬೋಧನಾ ಪದ್ಧತಿಗಳನ್ನು ತರಗತಿಗಳಲ್ಲಿ ಅನುಷ್ಠಾನಗೊಳಿಸಿ ಆತ್ಮವಿಶ್ವಾಸದಿಂದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ಒದಗಿಸಲು ಎಲ್ಲಾ ಶಿಕ್ಷಕರಿಗೆ ಆನ್‌ಲೈನ್ ಹಾಗೂ ಮುಖಾಮುಖಿ ವೃತ್ತಿಪರ ತರಬೇತಿಗಳನ್ನು ನೀಡಲಾಗುತ್ತಿದೆ. ಈವರೆವಿಗೂ ಕಲಿಕಾ ಚೇತರಿಕೆ ನಿರ್ವಹಿಸಲು ತರಬೇತಿ, ನಿಷ್ಠಾ 1.0 (1 ರಿಂದ 5ನೇ ತರಗತಿ ಶಿಕ್ಷಕರಿಗೆ), ನಿಷ್ಠಾ 2.0 (6 ರಿಂದ 12ನೇ ತರಗತಿ ಶಿಕ್ಷಕರಿಗೆ) ನಿಷ್ಠಾ 3.0 (ಬುನಾದಿ ಶಿಕ್ಷಣ ಶಿಕ್ಷಕರಿಗೆ ), EMTIP 1,2,3 ಮತ್ತು 4, ENK, ಶಿಕ್ಷಕರಿಗಾಗಿ ಆಂಗ್ಲ ಭಾಷೆಯಲ್ಲಿ ಬೋಧಿಸಲು ತರಬೇತಿ, TESoL, ಇತ್ಯಾದಿ ತರಗತಿಗಳನ್ನು ನೀಡಿ ಶಿಕ್ಷಕರನ್ನು ಬಲವರ್ಧನೆಗೊಳಿಸಲಾಗಿದೆ.<br>• 2019-20 ರಿಂದ 2020-21ರ ವರೆವಿಗೂ 300 ಶಾಲಾ ದಿನಗಳನ್ನು ಕಳೆದುಕೊಂಡ ವಿದ್ಯಾರ್ಥಿಗಳಲ್ಲಿ ಉಂಟಾದ ಕಲಿಕಾ ನಷ್ಟವನ್ನು 2022-23ನೆ ಸಾಲಿನಲ್ಲಿ ಚೇತರಿಸಲು, ಕಲಿಕಾ ಚೇತರಿಕೆ ಕಾರ್ಯಕ್ರಮವನ್ನು ಎನ್.ಇ.ಪಿ-2020ರ ಆಶಯದಂತೆಯೇ ಕಲಿಕಾ ಫಲಗಳಿಗುಣವಾಗಿ ಕಲಿಕಾ ಚಟುವಟಿಕೆಗಳನ್ನು ರೂಪಿಸಿ ಮಕ್ಕಳಲ್ಲಿ ಶ್ರೇಣಿ-ಸೂಕ್ತ ಕಲಿಕಾ ಫಲಗಳನ್ನು ಸಾಧಿಸುವಂತೆ ಕ್ರಮ ವಹಿಸಲಾಗಿದೆ.<br>• ಎನ್.ಇ.ಪಿ 2020ರ ಶಿಫಾರಸ್ಸುಗಳನ್ನು ಒಳಗೊಂಡ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು-ಬುನಾದಿ ಹಂತ ಬಿಡುಗಡೆಯಾದ ಹಿನ್ನೆಲೆಯಲ್ಲಿ ಸರ್ಕಾರದಿಂದ ರಚಿಸಲಾದ ಸಮಿತಿಯು ಬುನಾದಿ ಹಂತದ ರಾಜ್ಯ ಪಠ್ಯಕ್ರಮ ಚೌಕಟ್ಟನ್ನು ಸಿದ್ಧಪಡಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿದೆ.<br>-ಶ್ರೀ ಮದನ್ ಗೋಪಾಲ್, ಭಾ.ಆ.ಸೇ (ನಿವೃತ್ತ) ರವರ ಅಧ್ಯಕ್ಷತೆಯಲ್ಲಿ ಕಾರ್ಯಪಡೆ ರಚಿಸಿ ರಾಷ್ಟ್ರೀಯ ಶಿಕ್ಷಣ ನೀತಿ 2020ರನ್ವಯ ಶಾಲಾ ಹಂತದ (ಪೂರ್ವ ಪ್ರಾಥಮಿಕ ಶಿಕ್ಷಣದಿಂದ ಪದವಿ ಪೂರ್ವ ಶಿಕ್ಷಣದವರೆಗೂ) ವ್ಯವಸ್ಥೆಯಲ್ಲಿ ಗುಣಮಟ್ಟ ಸುಧಾರಣೆಗಳನ್ನು ತರುವ ನಿಟ್ಟಿನಲ್ಲಿ ಅನುಷ್ಠಾನ ರೂಪುರೇಷೆಗಳನ್ನು ಸಿದ್ಧಪಡಿಸಲಾಗುತ್ತಿದೆ. |

| | | |
|---|---|---|
| ಆ) | ಎನ್.ಪಿ.ಇ ಅನ್ವಯ 5+3+3+4 ಶಾಲಾ ವ್ಯವಸ್ಥೆಯನ್ನು ರೂಪಿಸಲು ಕೈಗೊಂಡಿರುವ ಕ್ರಮಗಳೇನು; | ರಾಷ್ಟ್ರೀಯ ಶಿಕ್ಷಣ ನೀತಿ 2020ರಲ್ಲಿ 3 ವರ್ಷದ ಪೂರ್ವ ಪ್ರಾಥಮಿಕ ಶಿಕ್ಷಣ ಹಾಗೂ ತರಗತಿಗಳು 1 ಮತ್ತು 2 ಬುನಾದಿ ಹಂತ: ತರಗತಿಗಳು 3 ರಿಂದ 5 ಸಿದ್ಧತಾ ಹಂತ: 6 ರಿಂದ 8 ಮಾಧ್ಯಮಿಕ ಹಂತ: 9 ರಿಂದ 12 ಪ್ರೌಢ ಹಂತ ಎಂದು ಗುರುತಿಸಲಾಗಿದೆ. |
| ಇ) | ಪ್ರಸ್ತುತ ಪ್ರತ್ಯೇಕವಾಗಿರುವ ಪ್ರೌಢ ಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳ ಸಂಯೋಜನೆ ಯಾವ ರೀತಿ ಆಗಲಿದೆ: | ರಾಷ್ಟ್ರೀಯ ಶಿಕ್ಷಣ ನೀತಿ-2020ರ ಶಿಫಾರಸ್ಸಿನಂತೆ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟನ್ನು 5+3+3+4ರ ವಿನ್ಯಾಸದನ್ವಯ ರಚಿಸುವಂತೆ ಕ್ರಮವಹಿಸಲಾಗುತ್ತಿದೆ. ಈ ಸಂಬಂಧ ಈಗಾಗಲೇ ಚಾಲನಾ ಸಮಿತಿಗಳನ್ನು ರಚಿಸಲಾಗಿರುತ್ತದೆ. |
| ಈ) | ಎನ್.ಇ.ಪಿ ಅನ್ವಯ (9,10,11 ಮತ್ತು 12) ಶಾಲಾ ವ್ಯವಸ್ಥೆಯನ್ನು ರೂಪಿಸಬೇಕಿರುವುದರಿಂದ ಪ್ರೌಢಶಾಲೆ ಅಥವಾ ಪದವಿ ಪೂರ್ವ ಕಾಲೇಜುಗಳನ್ನು ಹೊಸದಾಗಿ ಆರಂಭಿಸಲಾಗುವುದೇ; ಈ ಬಗ್ಗೆ ಯಾವ ರೀತಿ ವ್ಯವಸ್ಥೆ ಕಲ್ಪಿಸಲಾಗುವುದು; | ಸರ್ಕಾರದ ಆದೇಶ ಸಂಖ್ಯೆ: ಇಪಿ 66 ಎಸ್‌ಎಲ್‌ಬಿ 2022, ದಿನಾಂಕ: 20.10.2022ರಲ್ಲಿ ಕರ್ನಾಟಕ ಶಾಲಾ ಶಿಕ್ಷಣ ಮತ್ತು ಮೌಲ್ಯ ನಿರ್ಣಯ ಮಂಡಲಿಯ ಮೂಲಕ ಪದವಿ ಪೂರ್ವ ಪರೀಕ್ಷೆಯನ್ನು ಹಾಗೂ SSLC & ಇತರೆ ಪರೀಕ್ಷೆಗಳನ್ನು ನಡೆಸಲು ಮಂಜೂರಾತಿ ನೀಡಿ ಆದೇಶ ಹೊರಡಿಸಲಾಗಿದ್ದು, ಸಧ್ಯದಲ್ಲಿ ಸದರಿ ಆದೇಶದನ್ವಯ ಕ್ರಮವಹಿಸಲಾಗುತ್ತಿದೆ. |
| ಉ) | ಎನ್.ಇ.ಪಿ ಹಿನ್ನಲೆಯಲ್ಲಿ ಸೆಕೆಂಡರಿ ಬೋರ್ಡ್ ಪರೀಕ್ಷೆಗಳ ಬಗ್ಗೆ ಸರ್ಕಾರದ ನಿಲುವೇನು? | ರಾಜ್ಯದಲ್ಲಿ NEP ಯು ಹಂತ ಹಂತವಾಗಿ ಜಾರಿಯಾಗುತ್ತಿರುವುದರಿಂದ ಅನ್ವಯಿಸುವುದಿಲ್ಲ. |

**ಇಪಿ 484 ಪಿಜಿಸಿ 2022**

(ಬಿ.ಸಿ. ನಾಗೇಶ್)

**ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ**

**ಹಾಗೂ ಸಕಾಲ ಸಚಿವರು**